ಕನ್ನಡದ ಕಥಾಜಗತ್ತನ್ನು ವಿಸ್ತರಿಸಿದ ಕಥೆಗಾರರ ಕಥೆ ಬರೆಯುವ ಕಸುಬಿನ ಕುರಿತಾದ ಮಾಲಿಕೆ – 'ನನ್ನ ಕಥಾಪ್ರಸಂಗ'. ಕಥಾಯಾನದ ಖುಷಿ, ಸಂಕಟ, ಆ ಪ್ರಕಾರದ ಕುರಿತಾದ ವ್ಯಾಮೋಹ, ಸವಾಲು, ಮಾಂತ್ರಿಕತೆ, ಅದರಿಂದ ಆಗುವ ಬಿಡುಗಡೆ – ಇವೆಲ್ಲ ಅನುಭವಗಳನ್ನು ಒಳಗೊಳ್ಳಲಿರುವ ಈ ಮಾಲಿಕೆಗೆ ಬಹುಕಾಲದಿಂದ ಕಥೆಗಳನ್ನು ಬರೆದುಕೊಂಡು ಬಂದ ಕಥೆಗಾರರು ಬರೆಯುತ್ತ ಬಂದಿದ್ದಾರೆ. ಕಥೆಯ ನಿರೂಪಣಾ ವಿಧಾನದ ಕುರಿತ ಕಥೆಗಾರರ ಸ್ವಅನುಭವ 'ಮಯೂರ'ದ ಈ ಪುಟಗಳಲ್ಲಿದೆ

ಅದು ಕುಂದಾಪುರ. ಸಹಜವಾಗಿಯೇ ನನಗರಿಯದೆಯೆ ಒದಗಿ ಬಂದದ್ದು ನಾನು ಹುಟ್ಟಿದ ಈ ಊರು. ಅಲ್ಲಿನ ತನ್ನದೇ ವಿಶಿಷ್ಟ ಬಗೆಯ ಅಪ್ಪಟ ಕನ್ನಡವುಳ್ಳ ಜನ ಸಮುದಾಯ, ಪರಿಸರ, ಸಂವೇದನೆ. ಇಂಥ ಊರಲ್ಲಿ ದೊಡ್ಡ ಕುಟುಂಬವೊಂದರಲ್ಲಿ ನಾನು ನಾನು ಜನಿಸಿದೆ. ಅದು ಅವಿಭಕ್ತ ಕುಟುಂಬವಲ್ಲ. ತುಂಬ ಮಕ್ಕಳಿರುವ, ದಿನನಿತ್ಯ ಬಂಧುಬಾಂಧವರು ಅದರ ಆಚೆಯವರು ಬಂದು ಹೋಗುವ, ಉಳಕೊಳ್ಳುವ ಕುಟುಂಬ. ಬನ್ನಿ ಬನ್ನಿ ಎಂಬ ಸದಾ ಸ್ವಾಗತದ ಮನೆಯದು. ಆ ಮನೆಯಲ್ಲಿ ಯಾರು ಬಂದರೂ ಹೆಚ್ಚಲ್ಲ. ಯಾರು ಯಾವಾಗ ಬೇಕಾದರೂ ಬಂದು ತಂಗಿ ಊಟಕ್ಕೂ ತಿಂಡಿಗೂ ಇದ್ದು ಲೋಕಸುತ್ತಿನ ಮಾತಾಡಿ ಹೋಗುತಿದ್ದರು. ಆಗೆಲ್ಲ ಹೋಟೆಲುಗಳು ಅಪರೂಪವಾದ್ದರಿಂದಲೂ ವಾಹನ ಸಂಚಾರ ಹೆಚ್ಚು ಇಲ್ಲದ್ದರಿಂದಲೂ ನೆಂಟರು ಎಷ್ಟೊತ್ತಿಗಾದರೂ ಬರುತ್ತಿದ್ದರು. ನಡುರಾತ್ರಿ ಬಂದ ನೆಂಟರಿಗೆ ಮತ್ತೆ ಅಡುಗೆ ಮಾಡಿ ಬಡಿಸುತ್ತಿದ್ದ ನಿಶ್ಶಬ್ದ ಸದ್ದು ಈಗ ಕೇಳಿದೆಕೇಳಿದೆ ಎಂಬ ಹಾಗಿದೆ. ಅಡುಗೆ ಎಂದರೆ ಏನು, ತರಕಾರಿ ಕತ್ತರಿಸಿ, ಅರೆವಕಲ್ಲಿನಲ್ಲಿ ತೆಂಗಿನಕಾಯಿ ಮಸಾಲೆ ಅರೆದು ಸೌದೆಒಲೆ ಹಚ್ಚಿ ಕುದಿಸಿ ಮಾಡಿದ ಗಟ್ಟಿ ಮೇಲಾರಅನ್ನ. ಆ ದೊಡ್ಡ ಅರೆವ ಕಲ್ಲನ್ನು ತೊಳೆವ ಅರೆವ ರಾತ್ರಿ ಹೊತ್ತಿನ ನಿಶ್ಶಬ್ದಸದ್ದಿಗೆ ನಾವು ಅಲ್ಲೇ ಎಚ್ಚರಾಗಿ ಅಲ್ಲೇ ನಿದ್ದೆಹೋಗುತ್ತಿದ್ದೆವು. ವ್ಯಾಜ್ಯಕ್ಕಾಗಿ ತಂದೆಯೊಡನೆ ಮಾತಾಡಲು ಬರುತಿದ್ದ ಬಂಧುಗಳು ಒಳಗೂ ಬಂದು ವಿಶ್ರಮಿಸಿ ಬಾಯಾರಿಕೆ ಕುಡಿದು ಅದೂ ಇದೂ